AUM SAI RAM



# THE
# ALIKE RECONNECT



FEBRUARY 2019 | ISSUE 7 - NEWS LETTER OF ALIKE ALUMNI

ನಾನು ಅಳಿಕೆಯ ಬಾಲಕುಟೀರದ ಮಡಿಲಿಗೆ ಸೇರಿದ್ದು 1999ರ ಶೈಕ್ಷಣಿಕ ವರ್ಷದಲ್ಲಿ. ಆಗ ನನ್ನ ಅಣ್ಣ ಅದೇ ಶಾಲೆಯಲ್ಲಿ 9ನೇ ತರಗತಿಯಲ್ಲಿದ್ದ. ಆಗ ಅಳಿಕೆ ಶಾಲೆ ಮತ್ತು ಪರಿಸರದ ಬಗ್ಗೆ ಅಷ್ಟಾಗಿ ತಿಳುವಳಿಕೆ ಇಲ್ಲದಿದ್ದರೂ ಆ ಶಾಲೆಯ ಹೆಸರು ಹಾಗೂ ಕೀರ್ತಿಯನ್ನು ಸಾಕಷ್ಟು ಕೇಳಿದ್ದೆ. ಅಷ್ಟೇ ಅಲ್ಲದೆ ನನ್ನ ಸಹೋದರ ಅಲ್ಲಿಯೇ ವಿದ್ಯಾಭ್ಯಾಸ ನಡೆಸುತ್ತಿದ್ದುದರಿಂದ ಅದೇ ಶಾಲೆಗೆ ಸೇರಿಕೊಳ್ಳಲು ನಿರ್ಧರಿಸಿದೆ.

ನಾನು ಮತ್ತು ನನ್ನ ಅಣ್ಣ ಶಿರೀನ್ ರಂಗಸ್ವಾಮಿ ಇಬ್ಬರೂ ಮೂಲತಃ ವಿಧೇಯ ಸ್ವಭಾವದವರು. ಹಾಗಾಗಿ ಅಲ್ಲಿಯ ಜೀವನ, ಪರಿಸರ ಹಾಗೂ ದಿನಚರಿಗೆ ಹೊಂದಿಕೊಳ್ಳುವುದು ಅಷ್ಟಾಗಿ ಕಷ್ಟವೆನಿಸಲಿಲ್ಲ. ಆದರೆ ಇದೇ ಮಾತನ್ನು ನನ್ನ ಸಹಪಾಠಿಗಳ ವಿಷಯದಲ್ಲಿ ಹೇಳಲಾಗದು!! ಮೊದಮೊದಲಿಗೆ ಅವರಿಗೆಲ್ಲ ಅಳಿಕೆಯೆಂದರೆ ಸೆರೆಮನೆಯೆಂಬ ಭಾವನೆಯಿತ್ತು. ಕಾಲ ಕಳೆದಂತೆ ಸ್ನೇಹ, ಆಟ, ಪಾಠ ಹಾಗೂ ಬಾಂಧವ್ಯಗಳಿಂದ ಅಳಿಕೆ ನಮ್ಮ ಮನೆಯಾಯಿತು. ಬಾಂಧವ್ಯಗಳು ಬೆಸೆಯತೊಡಗಿದ್ದರಿಂದ ಕಷ್ಟ-ಸುಖಗಳನ್ನು ಹಂಚಿಕೊಳ್ಳುವುದು ಮೊದಲುಗೊಂಡುವು.

ಮುಗ್ಧತೆ, ಅಜ್ಞಾನಗಳಿಂದ ಮಾಯಾಲೋಕದಂತೆ ಭಾಸವಾದ ಅಳಿಕೆಯಲ್ಲಿ ನಮ್ಮ ಬದುಕು ಚಿಗುರೊಡೆದಾಗ ನಮ್ಮ ಪಾಲಿಗೆ ನೆರವಾಗಿ ನಿಂತವರು ನಮ್ಮ ಗುರುಗಳಾದ ವಾರ್ಡನ್ ಶ್ರೀ ಉದನೇಶ್ವರ ಭಟ್, ಶ್ರೀ ಅಚ್ಯುತ ಭಟ್, ಅಶೋಕಣ್ಣ ಮತ್ತು ಹಾಗು ಹಲವಾರು ಗುರುಗಳು. ಎಲ್ಲರ ಹೆಸರನ್ನು ಇಲ್ಲಿ ಪ್ರತ್ಯೇಕವಾಗಿ ಬರೆಯಲಾಗದಿದ್ದರೂ ಅವರ ಪ್ರಭಾವ ನನ್ನ ಹಾಗು ನನ್ನ ಅಣ್ಣನ ಮನಸ್ಸಿನಲ್ಲಿ ಎಂದಿಗೂ ಮಾಸದಂತೆ ಮನೆಮಾಡಿದೆ.

ಯಾವುದೇ ಕೊರತೆಗಳು ಇರದಂತೆ ನೋಡಿಕೊಂಡ ಇವರೆಲ್ಲರ ಪ್ರೀತಿಯಿಂದಲೇ ನಮಗೆ ಬಾಲಕುಟೀರ ಬರೀ ಹಾಸ್ಟೆಲ್ ಆಗಿರದೆ ಎರಡನೇ ಮನೆಯಾಯಿತು. ಹೊರಗಿನ ಪ್ರಪಂಚಕ್ಕೆ ಹೋಲಿಸಿದಂತೆ ಅದ್ಧೂರಿ ಮೂಲಸೌಕರ್ಯಗಳಿಲ್ಲದಿದ್ದರೂ ಅದು ದೊಡ್ಡ ವಿಷಯವೆನಿಸಲಿಲ್ಲ. ಆಟ, ಪಾಠ, ಶಿಸ್ತು, ಭಜನೆ ಇವುಗಳೇ ಜೀವಾಳವಾದವು. ಬಹುಶಃ ಬದುಕಿನ ಸೌಂದರ್ಯ, ಆನಂದ, ನೆಮ್ಮದಿಗಳನ್ನು ಅರಿತಿದ್ದು ನಾನು ಇಲ್ಲಿಯೇ. 9-10ನೇಯ ತರಗತಿಗಳು ಎಲ್ಲರ ಜೀವನದಲ್ಲಿ ನಿರ್ಣಾಯಕ ಘಟ್ಟ. ಬಾಲ್ಯದ ಹಸಿ ಯೋಚನೆಗಳು ಮೊಗ್ಗೊಡೆದು ಬದುಕಿನ ರೂಪರೇಷೆಗಳು ಸ್ಪಷ್ಟವಾಗಿ ಕಾಣಿಸತೊಡಗುವ ಆರಂಭದ ದಿನಗಳು ನನ್ನ ಬದುಕಿನಲ್ಲೂ ಈ ಕಾಲಘಟ್ಟ ನನ್ನ ಮುಂದಿನ ಜೀವನಕ್ಕೆ ದಿಕ್ಸೂಚಿಯಾಯಿತು.

## f l a s h b a c k . . A l i k e



**Sri Varun Rangaswamy, I.R.S.**
***Deputy Commissioner, GST, Bengaluru.***
**Civil services exams All India Ranking 627**

*Science is below the mind. Spirituality is beyond the mind.*

ಅಳಿಕೆಯ ಶಾರದಾವಿಹಾರದ ಪ್ರೌಢಶಾಲೆ ಒಂದು ಸುಂದರ ತಾಣ. ನಮ್ಮ ಭದ್ರತೆಗೆ ನೇಮಿಸಲ್ಪಟ್ಟಂತಿದ್ದ ಹಸಿರು ಹೊದಿಕೆಯನ್ನು ಹೊದ್ದ ಪರ್ವತ ಶ್ರೇಣಿ, ಹಂಚಿನ ಕೊಠಡಿಗಳು, ಆಟದ ಮೈದಾನ ಎಲ್ಲವೂ ನಯನಮನೋಹರವಾಗಿ ಕಂಗೊಳಿಸಿದ್ದು ಮಾತ್ರವಲ್ಲದೆ ನನ್ನ ಜೀವನಕ್ಕೆ ಮುಖ್ಯ ತಿರುವನ್ನು ನೀಡಿದವು. ಇಲ್ಲಿ ನಾನು ನನ್ನ ಎಲ್ಲ ಗುರುಗಳನ್ನು ಸ್ಮರಿಸುತ್ತೇನೆ. ಮಕ್ಕಳ ಮೇಲಿದ್ದ ಅವರ ಪ್ರೀತಿ, ಅವರ ಭವಿಷ್ಯದ ಬಗೆಗಿನ ಆಸಕ್ತಿ, ಅವರ ಆ ನಿಸ್ವಾರ್ಥ ಸೇವಾ ಮನೋಭಾವ ಇವೆಲ್ಲವೂ ಹೊರಪ್ರಪಂಚದಿಂದ ಬಂದ ನಮಗೆ ನಂಬಲು ಕಷ್ಟವಾಗುತ್ತಿತ್ತು. ಮತ್ತೊಂದು ಆಶ್ಚರ್ಯ ಹಾಗೂ ಕುತೂಹಲ ಮೂಡಿಸುತ್ತಿದ್ದ ಪ್ರಶ್ನೆ – ಕಾಡಿನ ಮಧ್ಯೆ ಇರುವ ಈ ಶಾಲೆಗೆ ಶಿಕ್ಷಕರು ಎಲ್ಲಿಂದ, ಯಾವ ಊರಿನಿಂದ ಬರುತ್ತಾರೆಂದು ಇನ್ನೂ ಕೆಲವರು ಯಾವುದೋ ಒಂದು ಗುಡ್ಡದ ಕಡೆಗೆ ಬೆರಳು ತೋರಿ ಅಲ್ಲಿಂದ ನಡೆದುಕೊಂಡು ಬರುತ್ತಾರೆಂದು ಹೇಳುತ್ತಿದ್ದರು. ಇವೆಲ್ಲ ಕೇಳಿದಾಗ ಆ ಜಾಗದ ಬಗೆಗಿನ ನಮ್ಮ ವಿಸ್ಮಯ ಇಮ್ಮಡಿಗೊಳ್ಳುತ್ತಿತ್ತು.

ಒಂಭತ್ತನೆಯ ತರಗತಿಗೆ ಬರುವ ಮುನ್ನವೇ ನನ್ನ ಅಣ್ಣ ನನಗೆ ಶ್ರೀ ರತ್ನಾಕರ ರೈ ಸರ್ ಬಗ್ಗೆ ಬಹಳಷ್ಟು ಹೇಳಿದ್ದ. ವಿಜ್ಞಾನ ಪುಸ್ತಕ ಹಿಡಿದು ನಮ್ಮ ತರಗತಿಗೆ ಬಂದವರು ನನ್ನ ಜೀವನದಲ್ಲಿ ಇಷ್ಟು ಪ್ರಭಾವ ಬೀರುತ್ತಾರೆಂದು ನಾನು ಅಂದುಕೊಂಡಿರಲಿಲ್ಲ. ಒಳಗೆ ಬಂದವರೇ ಪಠ್ಯ ಪುಸ್ತಕವನ್ನು ಮೇಜಿನ ಮೇಲಿರಿಸಿ "ನಾನಿಲ್ಲಿ ಬಂದಿರುವುದು ಈ ಪುಸ್ತಕದಲ್ಲಿರುವುದನ್ನು ಮಾತ್ರ ಕಲಿಸುವುದಕ್ಕಲ್ಲ. ಜೊತೆಗೆ ಜೀವನದ ಪಾಠಗಳನ್ನೂ ಕಲಿಯೋಣ." ಎಂದರು. ಮುಂದಿನ ಎರಡು ವರ್ಷಗಳು ಆದದ್ದೂ ಅದೇ. ವಿಜ್ಞಾನದ ಜೊತೆ ಜೊತೆಯಲ್ಲಿ ಮನಸ್ಸಿನಲ್ಲಿ ಆಗುವ ಮನಸ್ಸಿನ ತಳಮಳಗಳು, ದೇಹ ಶುದ್ಧಿ, ಭಗವಂತ – ಮನುಷ್ಯನ ಸಂಬಂಧ, ನೆಮ್ಮದಿಯ ಜೀವನ ನಡೆಸುವ ಬಗ್ಗೆ ಹೀಗೆ ಎಲ್ಲ ವಿಷಯಗಳ ವಿಮರ್ಶೆ ವಿಜ್ಞಾನದ ದೃಷ್ಟಿಕೋನದಿಂದಲೇ ನಡೆಯುತ್ತಿದ್ದುವು. ಅಂದು ಮೊಳಕೆಯೊಡೆದ ವೈಜ್ಞಾನಿಕ ದೃಷ್ಟಿಕೋನ ಇಂದು ನನ್ನಲ್ಲಿ ಹೆಮ್ಮರವಾಗಿ ಬೆಳೆದು ನಿಂತಿದೆ. ಬಾಹ್ಯ ಲೋಕಕ್ಕೆ ನಾನು ಸರಕಾರಿ ನೌಕರನಾದರೂ ಮನಸ್ಸಿನಲ್ಲಿ ನಾನೊಬ್ಬ ವಿಜ್ಞಾನಿಯೇ. ಎಲ್ಲದಕ್ಕೂ ಉತ್ತರ ವಿಜ್ಞಾನದಿಂದಲೇ ಬರಬೇಕು – ದೇವರು ಕೂಡ. ಇದನ್ನು ಇನ್ನೊಂದು ಪ್ರತ್ಯೇಕ ವಿಮರ್ಶೆಗೆ ಇಟ್ಟುಕೊಳ್ಳೋಣ.

ಬಾಲಕುಟೀರದ ಜೀವನ ನನ್ನಲ್ಲಿ ಹಾಗು ನನ್ನ ಅಣ್ಣನಲ್ಲಿ ಒಂದು ನೈತಿಕ ಚೌಕಟ್ಟನ್ನು ಹಾಕಿಕೊಟ್ಟಿತು. ನನ್ನ ಸ್ನೇಹಿತರ ವಿಷಯದಲ್ಲೂ ನಾನು ಇದನ್ನು ಹೆಮ್ಮೆಯಿಂದಲೇ ಹೇಳಬಲ್ಲೆ. ಈ ನೈತಿಕ ಅಡಿಪಾಯದಿಂದಲೇ ನನ್ನ ಸ್ನೇಹಿತರು ಹಾಗೂ ನನ್ನ ಅಣ್ಣ ಸಮಾಜಕ್ಕೆ ಒಂದು ಮಾದರಿ ಪ್ರಜೆಗಳಾಗಿ ಹೊರಹೊಮ್ಮುವುದಕ್ಕೆ ಸಾಧ್ಯವಾಯಿತು. ಕೊನೆಯದಾಗಿ ಬಾಲಕುಟೀರ ಹಾಗು ಅಲ್ಲಿನ ಗುರುವೃಂದದ ಪಾದಕ್ಕೆ ನನ್ನ ಅನಂತ ಕೋಟಿ ನಮನಗಳು. ನನ್ನ ಪ್ರೀತಿ ಹಾಗು ನನ್ನ ಭಾವನೆಗಳನ್ನು ಈ ಪುಟ್ಟ ಲೇಖನದಲ್ಲಿ ಬರೆಯಲು ಅಸಾಧ್ಯವೆಂದು ತಿಳಿದಿದ್ದರೂ ಒಂದು ಪುಟ್ಟ ಪ್ರಯತ್ನ ಮಾಡಿದ್ದೇನೆ. ಈ ಶಾಲೆ ಹಾಗೂ ಸಂಸ್ಥೆ ಇನ್ನೂ ಬೆಳೆಯಲಿ. ಎಲ್ಲರಿಗೂ ಇದೇ ಮಾದರಿಯ ಶಿಕ್ಷಣ ಸಿಗಲೆಂದು ಒಂದು ಮನಸಲ್ಲಿ ಪ್ರಾರ್ಥನೆ.

**Sri Varun Rangaswamy, I.R.S.**
***Deputy Commissioner, GST, Bengaluru*.**
**Civil services exams All India Ranking 627**

On 24.01.2019, Thursday on the occasion of Gratitude day, the 2nd PUC students received Divine Jyothi from esteemed elders of our Institution. Some of the outgoing students shared their experiences, 1st year students wished them and teachers and elders blessed them for their future endeavours.

## Started CET / NEET coaching at Alike










## Current status: Balakuteera High School Project





## Sri Sathya Sai Balvikas - 2019





## State level inspire award




### SRI SATHYA SAI LOKA SEVA HIGH SCHOOL, ALIKE

Mr. Ashlesh D.M 9th standard student has become eligible for the National Level "Inspire Award" during the year 2018-19. Besides he had exhibited the science project named "Gasifier Stove" in the state level science exhibition held at Mysore and he has been selected for the National Level Science Exhibition.

# CONTRIBUTIONS

Online Transfer with NEFT, RTGS to Trust Account.

For old students
Name: Sri Sathya Sai Loka Seva Trust, Alike
Bank: SBI SB A/c No: 32140812573
Branch: Alike (IFSC Code: SBIN0007607)

For All other Donors
Name: Sri Sathya Sai Loka Seva Trust, Alike
Bank: SBI SB A/c No: 10707559235
Branch: Alike (IFSC Code: SBIN0007607)

Contributions from ABROAD should be made to the following FC ACCOUNT ONLY:
Name: Sri Sathya Sai Loka Seva Trust, Alike
Bank: SBI FC Acc No: 30092024634
Branch: Alike (IFSC Code: SBIN0007607)
MICR Code: 574002235 Swift Code: SBININBB146

Cheque or DD via Post/Courier/Direct Deposit to Trust's account:
Payable to: Sri Sathya Sai Loka Seva Trust, Alike.

Postal address:
Chairman, Sri Sathya Sai Loka Seva Trust, Alike
Sathya Sai Vihar P.O. Bantwal Taluk, D.K.
Karnataka State PIN- 574235. 08255-239236 / 238736

**PLEASE inform about your payment by E-Mail-aliketrust@gmail.com or whatsapp to Alumni coordinator: Suresh K.V. 8618720431, Chandrahas T. Naik : 9591739236**

# Book Post

From,
Alike alumni,
Sri Sathya Sai Loka Seva Trust
Alike, Post Sathya Sai Vihar
Bantwal Tq, D.K. 574235

**Alumni coordinator:**

Chandrahas T. Naik : 9591739236
Suresh K.V. : 9845803954

www.alikeonline.org